Azadi Ka Amrit Mahotsav

G20

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24/1

ಆಯುಕ್ತರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 02.06.2023

**ಸುತ್ತೋಲೆ**

ವಿಷಯ : ವಿಶ್ವ ಪರಿಸರ ದಿನ -2023 (ಜೂನ್-5) ರ ವರ್ಚುವಲ್ ಪ್ಯಾನೆಲ್ ಚರ್ಚೆಯಲ್ಲಿ ಕಡ್ಡಾಯವಾಗಿ ಭಾಗವಹಿಸುವ ಬಗ್ಗೆ.

ಉಲ್ಲೇಖ : 1) ರಾಜ್ಯ ಸರ್ಕಾರದ ಪತ್ರ ಸಂಖ್ಯೆ:ಯುಸೇಇ/ರಾ.ಸೇ.ಯೋ/25/2023-24/85 ದಿನಾಂಕ: 26.05.2023
2) ಪಂಚಾಯತ್ ರಾಜ್ ಆಯುಕ್ತಾಲಯ ಇವರ ಪತ್ರ ಸಂಖ್ಯೆ:ಕಪಂರಾಅ/ಅಭಿ/ಜೀ.ವೈ/228/2023 ದಿನಾಂಕ: 01.06.2023

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (01) ಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸೇವಾ ಯೋಜನೆ ಕರ್ನಾಟಕ ಸರ್ಕಾರ, ತೋಟಗಾರಿಕೆ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅರಣ್ಯ ಇಲಾಖೆ, ಹಾಗೂ ಆಯಾ ಜಿಲ್ಲಾಡಳಿತಾ ಸಹಯೋಗದೊಂದಿಗೆ ದಿನಾಂಕ: 05.06.2023 ರಿಂದ ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ (ಜಿಲ್ಲಾವಾರು ಗಿಡಗಳ ಹಂಚಿಕೆ ವಿವರ ಲಗತ್ತಿಸಿದೆ). ಇದರ ಸದುಪಯೋಗವನ್ನು ಪಡೆಯುವಂತೆ ತಿಳಿಸಲಾಗಿದೆ.

ಉಲ್ಲೇಖ (02) ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಯುನಿಸೆಫ್ ಬೆಂಬಲದೊಂದಿಗೆ ಕರ್ನಾಟಕ ರಾಜ್ಯದ ಚೌಕಟ್ಟಿನೊಳಗೆ ಹವಾಮಾನ ಬದಲಾವಣೆಯನ್ನು ಸಂದರ್ಭೋಚಿತಗೊಳಿಸುವುದರ ಮೇಲೆ ಕೇಂದ್ರೀಕರಿಸಿದ ವರ್ಚುವಲ್ ಪ್ಯಾನೆಲ್ ಚರ್ಚೆಯನ್ನು ಆಯೋಜಿಸಲಾಗಿದ್ದು ಇದರಲ್ಲಿ ಹವಾಮಾನದ ಸವಾಲುಗಳ ಒಳಗೊಂಡ ವಿಷಯಗಳ ಮೇಲೆ ಮಿಷನ್ ಲೈಫ್ 75 ಕ್ರಿಯಾಶೀಲ ಅಂಶಗಳಲ್ಲಿ ವಿವರಿಸಿದಂತೆ ಸುಸ್ಥಿರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲುಯೋಜಿಸಲಾಗಿದೆ. ಈ ಕಾರ್ಯಕ್ರಮವು ದಿನಾಂಕ: 05.06.2023 ಬೆಳಗ್ಗೆ 11:00 ಗಂಟೆಯಿಂದ 1:00 ಗಂಟೆಯವರೆಗೆ ನಡೆಯಲ್ಲಿದ್ದು ANSSIRD & PR ಯೂಟ್ಯೂಬ್ ಚಾನಲ್‌ನಲ್ಲಿ ಲಿಂಕ್ https://www.youtube.com/live/leUqljAyIWs?feature=share ವೀಕ್ಷಿಸಬಹುದಾಗಿದೆ. ಸದರಿ ಕಾರ್ಯಕ್ರಮವಾದ ಬಳಿಕ ಸಂಸ್ಥೆಯಿಂದ ಭಾಗವಹಿಸಿದ ಉಪನ್ಯಾಸಕರು,ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರ ಮಾಹಿತಿಯನ್ನು ಲಿಂಕ್ https://merilife.org/login ನಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಈ ಮಹತ್ವಪೂರ್ಣ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಇದರ ಸದುಪಯೋಗ ಪಡೆಯುವಂತೆ ಕ್ರಮವಹಿಸಲು ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರಗಳನ್ನು ಲಗತ್ತಿಸಿದೆ.

K.G. 02/06/23
ನಿರ್ದೇಶಕರು

ಇವರಿಗೆ,

ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರರುಗಳಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿ:-

1. ರಾಜ್ಯ ಎನ್.ಎಸ್.ಎಸ್ ಅಧಿಕಾರಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು-01
2. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು
3. ಕಛೇರಿ ಕಡತಕ್ಕೆ.
4. ಇ -ಆಡಳಿತ ಇಲಾಖಾ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು

D:\16.03.2021\DTE All Files 2023-24\IDP 2023-24

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಂಖ್ಯೆ: ಯುಸೇಇ/ರಾಸೇಯೋ/25/~~2021~~/2023-24/85

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 26.05.2023

ಇವರಿಗೆ,
ಕಾರ್ಯಕ್ರಮ ಸಂಯೋಜನಾಧಿಕಾರಿಗಳು
ಎಲ್ಲಾ ವಿಶ್ವವಿದ್ಯಾಲಯಗಳು/ ನಿರ್ದೇಶನಾಲಯಗಳು.

ಮಾನ್ಯರೇ,

ವಿಷಯ: ದಿನಾಂಕ: 05.06.2023ರಂದು ನಡೆಯುವ ವನಮಹೋತ್ಸವ ಕಾರ್ಯಕ್ರಮಕ್ಕೆ ಸಹಕಾರ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರಿ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/19/2021/2023-24 ದಿನಾಂಕ: 15.05.2023.
2. ಸರ್ಕಾರಿ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/19/2021/2023-24 ದಿನಾಂಕ: 19.05.2023.

*****

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, **ರಾಷ್ಟ್ರೀಯ ಸೇವಾ ಯೋಜನೆ, ಕರ್ನಾಟಕ ಸರ್ಕಾರ, ತೋಟಗಾರಿಕೆ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅರಣ್ಯ ಇಲಾಖೆ ಹಾಗೂ ಆಯಾ ಜಿಲ್ಲಾಡಳಿತಗಳ ಸಹಯೋಗದೊಂದಿಗೆ ದಿನಾಂಕ: 05.06.2023ರಿಂದ ವನಮಹೋತ್ಸವ ಕಾರ್ಯಕ್ರಮ**ವನ್ನು ಹಮ್ಮಿಕೊಳ್ಳಲಾಗಿದೆ. **(ಜಿಲ್ಲಾವಾರು ಗಿಡಗಳ ಹಂಚಿಕೆಯ ವಿವರಗಳನ್ನು ಲಗತ್ತಿಸಿದೆ.)**

ಆದ್ದರಿಂದ ಸದರಿ ಕಾರ್ಯಕ್ರಮದಲ್ಲಿ ತಮ್ಮ ವಿಶ್ವವಿದ್ಯಾಲಯ/ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಾಲೇಜುಗಳ **ಎನ್. ಎಸ್. ಎಸ್. ಸ್ವಯಂ ಸೇವಕ/ಸೇವಕಿಯರು ಮತ್ತು ಎನ್. ಎಸ್. ಎಸ್. ಕಾರ್ಯಕ್ರಮ ಅಧಿಕಾರಿಗಳನ್ನು ನಿಯೋಜಿಸಿ, ಗಿಡಗಳನ್ನು ನೆಡಲು ಅನುಕೂಲವಾಗುವಂತೆ ಅಗತ್ಯ ಸಹಕಾರ ನೀಡಲು ಮತ್ತು ಸೂಕ್ತ ಮಾರ್ಗದರ್ಶನ ನೀಡುವುದರ** ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಪ್ರತಾಪ್ ಲಿಂಗಯ್ಯ)
ರಾಜ್ಯ ಎನ್.ಎಸ್.ಎಸ್.ಅಧಿಕಾರಿ.
ರಾಷ್ಟ್ರೀಯ ಸೇವಾ ಯೋಜನಾ ಕೋಶ.
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರತಿ:
1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ.
2. ಪ್ರಾದೇಶಿಕ ನಿರ್ದೇಶಕರು, ಎನ್. ಎಸ್. ಎಸ್. ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ.
3. ತೋಟಗಾರಿಕೆ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅರಣ್ಯ ಇಲಾಖೆ
4. ಎಲ್ಲಾ ಜಿಲ್ಲಾಡಳಿತಾಧಿಕಾರಿಗಳು.

Planting Material Available for Distribution with the Karnataka Forest

| Row Labels | Sum of Stock Quantity |
|---|---|
| Bagalkote | 446566 |
| Bangalore Rural | 803500 |
| Bangalore Urban | 828404 |
| Belgaum | 636089 |
| Bellary | 893840 |
| Bidar | 1141054 |
| Bijapur | 541870 |
| Chamarajanagara | 446000 |
| Chikkaballapur | 1399115 |
| Chikmagalur | 1625590 |
| Chitradurga | 1263420 |
| Dakshina Kannada | 646462 |
| Davanagere | 1140202 |
| Dharwad | 632795 |
| Gadag | 660879 |
| Gulbarga | 641000 |
| Hassan | 2071174 |
| Haveri | 878000 |
| Kodagu | 733837 |
| Kolar | 1531500 |
| Koppal | 582340 |
| Mandya | 869075 |
| Mysore | 1434479 |
| Raichur | 532000 |
| Ramanagara | 1080679 |
| Shimoga | 927800 |
| Tumkur | 1259804 |
| Udupi | 398350 |
| Uttar Kannada | 654202 |
| Yadagir | 282500 |
| **Grand Total** | **26982526** |

Neelam
NSS

**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿ/ಜೀ.ವೈ./228/2023 ದಿನಾಂಕ:01.06.2023
C.No: 1085669

**ಇವರಿಗೆ**

ಶ್ರೀ ಪ್ರದೀಪ್ ಪಿ. ಐ.ಎ.ಎಸ್.
ಆಯುಕ್ತರು,
ಕಾಲೇಜು ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು-560 001

ಮಾನ್ಯರೇ,

ವಿಷಯ: ವಿಶ್ವ ಪರಿಸರ ದಿನ-2023 (ಜೂನ್-5) ರ ವರ್ಚುವಲ್ ಪ್ಯಾನೆಲ್ ಚರ್ಚೆಯಲ್ಲಿ ರಾಜ್ಯದಲ್ಲಿನ ಸಂಬಂಧಪಟ್ಟ ಇಲಾಖೆಯ ಸಿಬ್ಬಂದಿ ವರ್ಗದವರನ್ನು ಕಡ್ಡಾಯವಾಗಿ ಭಾಗವಹಿಸಲು ನಿರ್ದೇಶನ ನೀಡುವ ಬಗ್ಗೆ

*****

ವಿಶ್ವ ಪರಿಸರ ದಿನವು ಪರಿಸರ ರಕ್ಷಣೆ ಮತ್ತು ಸಂರಕ್ಷಣೆಗಾಗಿ ಜಾಗೃತಿ ಮತ್ತು ಕ್ರಿಯೆಯನ್ನು ಉತ್ತೇಜಿಸುವ ಜಾಗತಿಕ ಆಚರಣೆಯಾಗಿದೆ. ಈ ಕುರಿತಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಯುನಿಸೆಫ್ ಬೆಂಬಲದೊAದಿಗೆ ಕರ್ನಾಟಕ ರಾಜ್ಯಕ್ಕೆ ಕುರಿತಾದ ಹವಾಮಾನ ಬದಲಾವಣೆ ಹಾಗೂ ಮಿಷನ್ ಲೈಫ್ 75 ಕ್ರಿಯಾಶೀಲ ಅಂಶಗಳ ಕುರಿತಾಗಿ ಪ್ಯಾನೆಲ್ ಚರ್ಚೆಯನ್ನು ಆಯೋಜಿಸಲಾಗಿದೆ.

ಪ್ಯಾನೆಲ್ ಚರ್ಚೆಯು ಕರ್ನಾಟಕ ರಾಜ್ಯದ ಚೌಕಟ್ಟಿನೊಳಗೆ ಹವಾಮಾನ ಬದಲಾವಣೆಯನ್ನು ಸಂದರ್ಭೋಚಿತಗೊಳಿಸುವುದರ ಮೇಲೆ ಕೇಂದ್ರೀಕರಿಸುತ್ತದೆ, ಅದರ ಪರಿಣಾಮಗಳು, ಸವಾಲುಗಳು ಒಳಗೊಂಡAತೆ ಜನರಲ್ಲಿ ಮಿಷನ್ ಲೈಫ್‌ನ 75 ಕ್ರಿಯಾಶೀಲ ಅಂಶಗಳಲ್ಲಿ ವಿವರಿಸಿದಂತೆ ಸುಸ್ಥಿರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಆಯೋಜನೆ ಮಾಡಲಾಗಿದೆ. ಈ ಕಾರ್ಯಕ್ರಮದ ಮೂಲಕ ಗ್ರಾಮೀಣ ಪ್ರದೇಶದ ಮಹಿಳೆಯರು, ವಿದ್ಯಾರ್ಥಿ-ವಿದ್ಯಾರ್ಥಿನಿಯರು, ವಿವಿಧ ಇಲಾಖೆಗಳ ಸರ್ಕಾರಿ ಅಧಿಕಾರಿಗಳು ಮತ್ತು ಸಾರ್ವಜನಿಕರಲ್ಲಿ ಹವಾಮಾನ ಬದಲಾವಣೆ ಹಾಗೂ ಮಿಷನ್ ಲೈಫ್‌ನ 75 ಕ್ರಿಯಾಶೀಲ ಅಂಶಗಳನ್ನು ಕುರಿತು ಜಾಗೃತಿ ಮೂಡಿಸುವಲ್ಲಿ ಸಹಾಯ ಮಾಡುತ್ತದೆ.

ಈ ಮಹತ್ವಪೂರ್ಣ ಕಾರ್ಯಕ್ರಮಕ್ಕೆ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಹಾಗೂ ತಾಂತ್ರಿಕ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಂತಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಇಲಾಖೆಯ ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸಲು ANSSIRD & PR ಯೂಟ್ಯೂಬ್ ಚಾನಲ್ ನಲ್ಲಿ ವೀಕ್ಷಿಸುವುದು.

ಕಾರ್ಯಕ್ರಮದ ಶೀರ್ಷಿಕೆ: ವಿಶ್ವ ಪರಿಸರ ದಿನ - ಹವಾಮಾನ ಬದಲಾವಣೆ ಮತ್ತು ಪರಿಸರ ಸ್ನೇಹಿ ಜೀವನಶೈಲಿ, ದಿನಾಂಕ: 05.06.2023, ಸಮಯ: ಬೆಳಿಗ್ಗೆ 11 ಗಂಟೆಯಿಂದ 1 ಗಂಟೆಯವರೆಗೆ

**ಲಿಂಕ್:** https://www.youtube.com/live/IeUqIjAylWs?feature=share

**ಲಿಂಕ್:** https://www.youtube.com/live/IeUqljAylWs?feature=share

ಕಾರ್ಯಕ್ರಮವಾದ ಬಳಿಕ ಭಾಗವಹಿಸಿದ್ದ ಜಿಲ್ಲಾ/ತಾಲ್ಲೂಕಿನ ಅಧಿಕಾರಿಗಳು ಭಾಗವಹಿಸಿದ್ದ ಸಿಬ್ಬಂದಿ ವರ್ಗದವರ ಸಂಖ್ಯೆ ಹಾಗೂ ಮಾಹಿತಿಯನ್ನು ಈ ಕೆಳಗೆ ನೀಡಲಾದ ಲಿಂಕ್‌ನಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ.

ಭಾಗವಹಿಸುವಿಕೆಯನ್ನು ನಮೂದಿಸುವ ವಿಧಾನ: ಈ ಮುಂದಿನ ಲಿಂಕ್‌ನ್ನು ಬಳಸಿ "ಫೀಲ್ಡ್ ಆಫೀಸ್" ಎಂಬುದನ್ನು ಆಯ್ಕೆ ಮಾಡಿ ನೋಂದಣಿ ಮಾಡಿ ಭಾಗವಹಿಸುವಿಕೆಯನ್ನು ಖಚಿತಪಡಿಸುವುದು ಕಡ್ಡಾಯವಾಗಿರುತ್ತದೆ.

**ಲಿಂಕ್:** https://merilife.org/login

ಈ ಮಹತ್ವದ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನ ಹಾಗೂ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಬರುವ ಮೇಲಿನ ಎಲ್ಲಾ ಸಿಬ್ಬಂದಿ ವರ್ಗದವರು ತಪ್ಪದೇ ಕಡ್ಡಾಯವಾಗಿ ಈ ಮೇಲಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರ್ದೇಶನ ನೀಡಿ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಸಹಕರಿಸಬೇಕಾಗಿ ಕೋರಿದೆ

ತಮ್ಮ ವಿಶ್ವಾಸಿ,

ಆಯುಕ್ತರು

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,

ಬೆಂಗಳೂರು.